ಪ್ರೊ. ಎಂ. ಡಿ. ಸಂಜುಂಡಸ್ವಾಮಿ :– ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಸೆಕ್ಷನ್ 433 (ಎ) ಹೇಳುತ್ತಿದ್ದಾರೆ. ನಾನು ಸೆಕ್ಷನ್ 433 ಬಗ್ಗೆ ಗಮನ ಸೆಳೆಯುತ್ತಿದ್ದೇನೆ.

"The appropriate Government may sentence/commute (a) sentence of death for any other punishment provided by the I. P. C., (b) the sentence of imprisonment for a term not exceeding 14 years or fine."

ಕಮ್ಯೂಟ್ ಮಾಡುವುದಕ್ಕೆ ಅಧಿಕಾರ ಉಂಟು. ಇದಕ್ಕೆ ಕೇಂದ್ರದ ಒಪ್ಪಿಗೆ ಪಡೆಯಬೇಕು. ಈಗಾಗಲೇ ನೆರೆಯ ರಾಜ್ಯಗಳು ಈ ಕೆಲಸ ಮಾಡಿವೆ. ನಮ್ಮಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್ 1978 ನೇ ಇಸವಿಯಲ್ಲಿ ಅಮೆಂಡ್‌ಮೆಂಟ್ ಆಯಿತು. ಈಗಾಗಲೇ ನಾವು 12 ವರ್ಷ ಕಳೆದಿದ್ದೇವೆ. ಆದಕಾರಣ ನಮ್ಮ ರಾಜ್ಯ ಸರ್ಕಾರ ತಡ ಮಾಡದೆ ಈ ತಿದ್ದುಪಡಿಯನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಧರಮಸಿಂಗ್ :– ಇದು ಸರ್ಕಾರದ ತೀವ್ರವಾದ ಪರಿಶೀಲನೆಯಲ್ಲಿದೆ. ನಮ್ಮ ಮೊದಲಿನ ಮುಖ್ಯಮಂತ್ರಿಗಳು ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ತೀವ್ರವಾಗಿ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :– ಅನೇಕ ವಿಶೇಷವಾದ ಸಂದರ್ಭಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಪಟ್ಟಿರಬಹುದಾದ ಅವಧಿಯನ್ನು ಕಡಿಮೆ ಮಾಡಿರುವ ನಿದರ್ಶನಗಳು ಉಂಟು. ಹೊಸ ಸರ್ಕಾರ ರಾಜ್ಯದಲ್ಲಿ ಬಂದಿದೆ. ಇದರ ಜ್ಞಾಪಕಾರ್ಥವಾಗಿ ಕೆಲವು ವರ್ಷ ಮತ್ತು ಡಾಕ್ಟರ್ ಅಂಬೇಡ್ಕರ್ ಜನ್ಮಶತಾಬ್ದಿಯನ್ನು ಏನು ಆಚರಣೆ ಮಾಡುತ್ತಿದ್ದೇವೆ, ಅದರ ಜ್ಞಾಪಕಾರ್ಥವಾಗಿ ಕೆಲವು ವರ್ಷ ಹೀಗೆ ಅವರ ಜೀವಾವಧಿ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆಯೇ ?

ಶ್ರೀ ಧರ್ಮಸಿಂಗ್ :– ಸರ್ಕಾರ ಇದರ ಬಗ್ಗೆ ಗಮನ ಕೊಡುತ್ತದೆ.

ಶ್ರೀ ಶಿವಾನಂದ ಪೆಚ್. ಕೌಜಲಗಿ :– ಸನ್ಮಾನ್ಯ ಅಧ್ಯಕ್ಷರೇ, 1989 ನೇ ಇಸವಿಯಲ್ಲಿ ಜವಾಹರಲಾಲ್ ನೆಹರೂ ಅವರ ಜನ್ಮಶತಾಬ್ದಿ ಸಂದರ್ಭದಲ್ಲಿ ಪಂಜಾಬ್‌ನಲ್ಲಿ ಏಳು ವರ್ಷ ಯಾರು ಸೆರೆಮನೆ ವಾಸ ಅನುಭವಿಸಿದ್ದಾರೆ ಅವರನ್ನು ಬಿಡುಗಡೆ ಮಾಡಿದ್ದಾರೆ. ಅದೇ ಪ್ರಕಾರವಾಗಿ ಆಂಧ್ರದಲ್ಲಿ 1986–87 ರಲ್ಲಿ ಯಾರು ಏಳು ವರ್ಷ ಸೆರೆಮನೆ ವಾಸ ಅನುಭವಿಸಿದ್ದಾರೆ ಅವರನ್ನು ಬಿಡುಗಡೆ ಮಾಡಿದ್ದಾರೆ. ಪಾಂಡಿಚೇರಿಯಲ್ಲೂ ಈ ರೀತಿ ಮಾಡಿದ್ದಾರೆ. ಅಪರಾಧಿಗಳು ಏನೋ ಒಂದು ತಪ್ಪು ಭಾವನೆಯಿಂದ ಆಫೆನ್ಸ್ ಮಾಡಿರುತ್ತಾರೆ. ಆದಕಾರಣ ಅವರಿಗೆ ರೆಮಿಷನ್ ಕೊಟ್ಟು ಬಿಡುಗಡೆ ಮಾಡುವ ಕ್ರಮ ಕೈಗೊಳ್ಳುತ್ತೀರಾ ಹೇಗೆ ? ಮಾನ್ಯ ಭೈರೇಗೌಡರು ಹೇಳಿದಹಾಗೆ, ಡಾಕ್ಟರ್ ಅಂಬೇಡ್ಕರ್ ಜನ್ಮಶತಾಬ್ದಿ ಇರುವ ಕಾರಣ ಶಿಕ್ಷೆಯನ್ನು ಕಡಿಮೆ ಮಾಡಿ ಬಿಡುಗಡೆ ಮಾಡುತ್ತೀರಾ ? ಅದೂ ಅಲ್ಲದೆ ಸಂವಿಧಾನದ 161ನೇ ಕಲಮ್ ಪ್ರಕಾರ ಬಿಡುಗಡೆ ಮಾಡುವುದಕ್ಕೆ ಸ್ಟೇಟ್ ಗೌರ್ನಮೆಂಟ್‌ಗೆ ಪವರ್ಸ್ ಇದೆ. ಇದರ ಪ್ರಕಾರ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ ಎಂದು ಕೇಳುತ್ತೇನೆ

ಶ್ರೀ ಧರ್ಮಸಿಂಗ್ :– ಅಂಬೇಡ್ಕರ್ ಜನ್ಮಶತಾಬ್ದಿ ಪ್ರಯುಕ್ತ ಇದನ್ನು ಮಾಡಬೇಕೆಂದು ಎಲ್ಲಾ ಕಡೆಗೆ ಒತ್ತಾಯ ಇದೆ. ಸಾಕಷ್ಟು ಶಾಸಕರು ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ನಮ್ಮ ಉನ್ನತ ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಇದನ್ನು ಪರಿಶೀಲನೆ ಮಾಡಿ, ಎಲ್ಲಿಯವರೆಗೆ ಆಗಬಹುದೆಂದು ನೋಡಿ ಸರ್ಕಾರ ಪರಿಶೀಲನೆ ಮಾಡುತ್ತದೆ.

ವಿಷಯ :– ಅಬಕಾರಿ ಉಪ ನಿರೀಕ್ಷಕರ ಬಡ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 284 (891)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :– ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಬಕಾರಿ ಉಪ ನಿರೀಕ್ಷಕರ/ಅಬಕಾರಿ ನಿರೀಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ವಿಚಾರ ಸರ್ಕಾರದ ಬಳಿ ಇರುವುದು ನಿಜವೇ ?

ಆ) ಅಬಕಾರಿ ಇಲಾಖೆಯ ಕೇಡರ್ ಮತ್ತು ರಿಕ್ರೂಟ್‌ಮೆಂಟ್ ನಿಯಮಾವಳಿಯ ಅಮೆಂಡ್‌ಮೆಂಟ್ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ?

ಇ) ಹಾಗಿದ್ದಲ್ಲಿ ಅಬಕಾರಿ ಉಪ ನಿರೀಕ್ಷಕರ/ಅಬಕಾರಿ ನಿರೀಕ್ಷಕರ ಮತ್ತು ಅಬಕಾರಿ ಉಪ ಅಧೀಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು) :–

ಅ) ಇಲ್ಲ.

ಆ) ಇದೆ.

ಇ) ಹಾಲಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ ಅಬಕಾರಿ ಉಪ ನಿರೀಕ್ಷಕ ಅಬಕಾರಿ ನಿರೀಕ್ಷಕ, ಅಬಕಾರಿ ಉಪ ಅಧೀಕ್ಷಕ, ಮತ್ತು ಅಬಕಾರಿ ಅಧೀಕ್ಷಕರ ಹುದ್ದೆಗಳನ್ನು ವರಿಷ್ಠತೆ–ಕೋರ್-ಗುಣಮಟ್ಟದ ಆಧಾರದ ಮೇಲೆ ಬಡ್ತಿಯಿಂದ ತುಂಬಲಾಗುತ್ತಿದೆ.

ಶ್ರೀ ಟಿ. ಬಿ. ಜಯಚಂದ್ರ :– ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಎರಡನೇ ಪ್ರಶ್ನೆಗೆ ಉತ್ತರ ಕೊಡುತ್ತಾ ಅಬಕಾರಿ ಇಲಾಖೆಯ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಸರ್ಕಾರದ ಮುಂದಿದೆ ಎಂಬ ಮಾತನ್ನು ಹೇಳಿದ್ದಾರೆ. It is stated C and R rules is in force. ಅಬಕಾರಿ ಇಲಾಖೆಯಲ್ಲಿ ಪ್ರಮೋಷನ್ ಕೊಡಬೇಕಾದರೆ ಸೀನಿಯಾರಿಟಿ ಪ್ರಕಾರ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ನನ್ನ ಒಂದನೇ ಪ್ರಶ್ನೆಯಲ್ಲಿ ಪ್ರಮೋಷನ್ ಪೆಂಡೆನ್ಸಿ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಇವರ ನೀತಿ ಏನೆಂಬುದನ್ನು ಸ್ಪಷ್ಟಪಡಿಸಬೇಕು. ಒಬ್ಬ ಸಬ್‌ಇನ್‌ಸ್ಪೆಕ್ಟರ್ ಆಗಿ ನಿಮ್ಮ ಇಲಾಖೆಯನ್ನು ಸೇರಿರತಕ್ಕಂಥವನು 25–26 ವರ್ಷ ಸರ್ವೀಸ್ ಮಾಡಿ ಸಬ್ ಇನ್‌ಸ್ಪೆಕ್ಟರ್ ಆಗಿಯೇ ರಿಟೈರ್ ಆಗತಕ್ಕದ್ದು ನಿಮ್ಮ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅವರಿಗೆ ಬೇಗ ಪ್ರಮೋಷನ್ಸ್ ಕೊಡುತ್ತೀರಾ ? ಸಿ ಅಂಡ್ ಆರ್. ರೂಲ್ಸ್ ಮಾಡಿ ಪುಸ್ತಕದಲ್ಲಿ ಇಟ್ಟುಕೊಂಡರೆ ಹೇಗೆ ? ಪ್ರಮೋಷನ್ ಯಾರಿಗೂ ಕೊಡಬಾರದು ಎಂಬುದು ತಮ್ಮ ನೀತಿಯೇ ? ಒಂದೇ ಹುದ್ದೆಯಲ್ಲಿ 25–26 ವರ್ಷ ಸರ್ವೀಸ್ ಮಾಡಿರುವವರ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಕೆ. ಶಿವಮೂರ್ತಿ :– ಮೊದಲನೇ ಪ್ರಶ್ನೆಯಲ್ಲಿ ಏನಾಗಿದೆ ಎಂದರೆ; many years ಎಂದು ಕೇಳಿದ್ದಾರೆ. many years ನಿಂದ ಇಲ್ಲ ಎಂದು ಹೇಳಿದ್ದೇನೆ. ಇತ್ತೀಚೆಗೆ ಒಂದು ವರ್ಷ ದಿಂದ ಇರಬಹುದು. ನಾನು ಸಚಿವನಾದ ಮೇಲೆ ತಕ್ಷಣ ಒಂದು ಮೀಟಿಂಗ್ ಕರೆದು, ಎಕಾನಮಿ ಮೆಷರ್ ಇರುವ ಪ್ರಯುಕ್ತ ಅದನ್ನು ರಿಲ್ಯಾಕ್ಸ್ ಮಾಡಿಕೊಡಿ, ಆದು ಆದನಂತರ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಆದರ ಬಗ್ಗೆ ಮೀಟಿಂಗ್ ಮಾಡಿದ್ದೇನೆ. ಅದು ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಪೆಂಡಿಂಗ್ ಇದೆ. ಆದು ಆದನಂತರ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ :– ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿ ಬಡ್ತಿ ಕೊಡುವುದಕ್ಕೆ ಒಂದು ನೀತಿ ನಿರೂಪಣೆಯನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಸೂಪರಿಂಟೆಂಡೆಂಟ್ ಆಫ್ ಎಕ್ಸೈಜ್ ಅಥವಾ ಅಡಿಷನಲ್ ಕಮೀಷನರ್ ಆಥವಾ ಡೆಪ್ಯುಟಿ ಕಮೀಷನರ್ ಹುದ್ದೆಗಳನ್ನು ಬೆಳಿಗ್ಗೆ ಒಂದು ರಾತ್ರಿ ಒಂದು ಹುದ್ದೆಗಳನ್ನು ಕ್ರಿಯೇಟ್ ಮಾಡುತ್ತೀರಿ. ಆದರೆ ನಿಮ್ಮ ಇಲಾಖೆಯಲ್ಲಿ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಕೆಲಸಕ್ಕೆ ಸೇರಿ ಸುಮಾರು 25 ವರ್ಷಗಳಾದರೂ ಸಹ ಅವನಿಗೆ ಪ್ರಮೋಷನ್ ಇಲ್ಲ, ಅವನಿಗೆ ಪ್ರಮೋಶನ್ ಕೊಡಲು ಎಕಾನಮಿ ಆರ್ಡರ್ ಅಡ್ಡ ಬಂದರೆ ಇದು ಯಾವ ನೀತಿಸ್ವಾಮಿ ? ತಾವು ಒಂದು ಮಾತನ್ನು ಒಪ್ಪಿಕೊಳ್ಳಿ, 25 ವರ್ಷ ಗಳಿಂದ ಪ್ರಮೋಷನ್ ಕೊಟ್ಟಿಲ್ಲ ಇವರಿಗೆ ಇನ್ನು ಇಷ್ಟು ದಿವಸಗಳಲ್ಲಿ ಪ್ರಮೋಶನ್ ಕೊಡುತ್ತೇವೆಂದು ಆಶ್ವಾಸನೆ ಕೊಡಿ. ಅದು ಬಿಟ್ಟು ತಾವು ಈ ರೀತಿ ಉತ್ತರ ಹೇಳುವುದು ಸರಿಯಲ್ಲ.

ಶ್ರೀ ಕೆ. ಶಿವಮೂರ್ತಿ :– ಮಾನ್ಯ ಅಧ್ಯಕ್ಷರೇ, ನಾನು ಬಂದಮೇಲೆ ಇವರ ಬಗ್ಗೆ ಸ್ಪೇಷಲ್ಲಾಗಿ ಮೀಟಿಂಗ್ ಮಾಡಿದ್ದೇನೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜೆ. ಸಿ. ಮಧುಸ್ವಾಮಿ :– ಸ್ವಾಮಿ, ಈಗ ರಾಜ್ಯದಲ್ಲಿ ಟಾಡಿ ಮಾರಾಟ ನಿಷೇಧವಾಗಿದೆ. ಆದ್ದರಿಂದ ಈಗ ಇರತಕ್ಕಂಥ ಸಿಬ್ಬಂದಿಯನ್ನು ಏನಾದರೂ ಕಡಿಮೆ ಮಾಡುತ್ತೀರಾ ಹೇಗೆ ?

ಅಧ್ಯಕ್ಷರು :– ಅದಕ್ಕೂ ಇದಕ್ಕೂ ಸಂಬಂಧ ಏನು ?

ಶ್ರೀ ಕೆ. ಶಿವಮೂರ್ತಿ :– ಆ ರೀತಿಯಲ್ಲಿ ಏನೂ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಸೇಂದಿ ಮಾರಾಟ ನಿಲುಗಡೆಯಾಗಿರತಕ್ಕಂಥ ಈ ಸಂದರ್ಭದಲ್ಲಿ ಈಗ ಹಾಲಿ ಎಷ್ಟು ಜನ ಸಿಬ್ಬಂದಿ ಇದ್ದಾರೆ, ಆ ಸಿಬ್ಬಂದಿಯಲ್ಲಿ ಕೆಲವರಿಗೆ

ಕೆಲಸ ಕಡಿಮೆಯಾಗುತ್ತದೆ. ಇದರಿಂದ ಆ ಸಿಬ್ಬಂದಿಯನ್ನು ಏನಾದರೂ ಬೇರೆ ಕಡೆ ಕಳುಹಿಸಿಕೊಡುತ್ತೀರೋ ಹೇಗೆ ?

ಶ್ರೀ ಕೆ. ಶಿವಮೂರ್ತಿ :– ನಿಜವಾಗಿ ನಮ್ಮ ಇಲಾಖೆಯಲ್ಲಿ ಇನ್ನೂ ಸಿಬ್ಬಂದಿ ಕೊರತೆ ಇದೆ; ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಎನ್‌ಫೋರ್ಸ್‌ಮೆಂಟ್ ಸೆಲ್ ಇದೆ, ಅವರು ಬಾರ್ಡರ್ ಏರಿಯಾಗಳಲ್ಲಿ ಕಳ್ಳ ಮಾಲು ಬಾರದಂತೆ ನೋಡಿಕೊಳ್ಳಬೇಕಾಗುತ್ತದೆ. ಅದಕ್ಕೆ ನಮಗೆ ಸಿಬ್ಬಂದಿ ಹೆಚ್ಚು ಬೇಕು. ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಅಧ್ಯಕ್ಷರು :– ಮಾನ್ಯ ಬೈರೇಗೌಡರ 285 (1149) ನೇ ಪ್ರಶ್ನೆಗೆ ಸರ್ಕಾರದವರು ಸಮಯ ಕೇಳಿದ್ದಾರೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ನಾನು ಎರಡು–ಮೂರು ಸಾರಿ ಈ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಕೆಲವು ಮುಖ್ಯವಾಗಿರತಕ್ಕಂಥ ಪ್ರಶ್ನೆಗಳನ್ನು ಕೇಳಿದಾಗ, ಅದರಿಂದ ಸರ್ಕಾರಕ್ಕೆ ಆದಾಯ ಬರತಕ್ಕಂಥ ಪ್ರಶ್ನೆಗಳನ್ನು ಕೇಳಿದಾಗ ಮತ್ತು ಎಲ್ಲಿ ಸರ್ಕಾರದ ಆದಾಯ ಸೋರಿ ಹೋಗುತ್ತಿದೆ ಎನ್ನತಕ್ಕಂಥ ಪ್ರಶ್ನೆಗಳನ್ನು ಕೇಳಿದಾಗ ನನಗೆ ಸರ್ಕಾರದಿಂದ ಉತ್ತರ ಬರುವುದಿಲ್ಲ. ಈಗ ಮುಖ್ಯಮಂತ್ರಿಗಳು ದೆಹಲಿಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಅಬಕಾರಿ ಬಾಬಿನಿಂದ ನಮಗೆ ಹಣ ಏನೂ ಕಡಿಮೆ ಆಗಿಲ್ಲ, ಇದರ ಬಗ್ಗೆ ಬೇಕಾದರೆ ನಾವು ಒಂದು ವೈಟ್ ಪೇಪರ್ ಹೊರಡಿಸುತ್ತೇವೆನ್ನುವ ಹೇಳಿಕೆ ಸಹ ಕೊಟ್ಟಿದ್ದಾರೆ. ಬಹಳ ಸಂತೋಷ. ನಾನು ಅದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಪ್ರಶ್ನೆಯನ್ನು ಕೇಳಿರತಕ್ಕಂಥಾದ್ದು

ಅಧ್ಯಕ್ಷರು :– ವೈಟ್ ಪೇಪರ್ ಹೊರಡಿಸಲು ಮಾಹಿತಿ ಸಂಗ್ರಹ ಮಾಡುತ್ತಿರಬಹುದು.

ಶ್ರೀ ಸಿ. ಬೈರೇಗೌಡ :– ನನಗೆ ಪ್ರಶ್ನೆ ಕೇಳತಕ್ಕಂಥ ಹಕ್ಕು ಇದೆ, ಅದನ್ನು ನಾನು ಚಲಾಯಿಸಿದ್ದೇನೆ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ನಾನು ಇದುವರೆಗೂ ಸುಮಾರು 44 ಪ್ರಶ್ನೆಗಳನ್ನು ಕಳುಹಿಸಿದ್ದು, ಅದರಲ್ಲಿ 24 ಪ್ರಶ್ನೆಗಳು ಅಡ್ಮಿಟ್ ಆಗಿದ್ದು, 9 ಪ್ರಶ್ನೆಗಳಿಗೆ ಇದುವರೆಗೂ ಉತ್ತರ ಸಿಕ್ಕಿಲ್ಲ.

ಅಧ್ಯಕ್ಷರು :– ಈ ಪ್ರಶ್ನೆಯನ್ನು 26ನೇ ತಾರೀಖು ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ತಾವು ನನ್ನ ರಕ್ಷಣೆಗೆ ಬರಬೇಕು. ಪ್ರಶ್ನೆ ಕೇಳುವುದು ನನ್ನ ಹಕ್ಕು. ನನ್ನ ಹಕ್ಕನ್ನು ರಕ್ಷಣೆ ಮಾಡಬೇಕು. ಸರ್ಕಾರ ಉತ್ತರ ಒದಗಿಸಿಕೊಡಬೇಕು. ತಾವು ದಯಮಾಡಿ ನನ್ನ ರಕ್ಷಣೆಗೆ ಬರಬೇಕೆಂದು ನನ್ನ ವಿನಂತಿ.

ವಿಷಯ :– ಆರಾಕ್ ಬಾಟಲ್‌ಗಳಿಗೆ ಸೆಕ್ಯೂರಿಟಿ ಲೇಬಲ್ ಇಲ್ಲದೆ ಇರುವುದರ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 286 (883)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್‌ಗೆ (ಐ.ಎಂ.ಎಲ್.) ಬಾಟ್ಲಿಗಳಿಗೆ ಸೆಕ್ಯೂರಿಟಿ ಲೇಬಲ್ ಇದ್ದು, ಆರಾಕ್ ಬಾಟಲ್‌ಗಳಿಗೆ ಸೆಕ್ಯೂರಿಟಿ ಲೇಬಲ್ ಇಲ್ಲದೆ ಇರುವುದು ನಿಜವೇ ?

ಆ) ಈ ತಾರತಮ್ಯ ಸರಿಪಡಿಸಲು ಸರ್ಕಾರ ಕ್ರಮ ಕೈಗೊಳ್ಳಲು ಆಲೋಚಿಸಿದೆಯೇ ?

ಇ) ಈ ಸೆಕ್ಯೂರಿಟಿ ಲೇಬಲ್ ಎಲ್ಲಿ ತಯಾರಿಸಲಾಗುತ್ತಿದೆ ?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು) :–

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಇ) 1) ಸರಾಯಿ ಶೀಸೆಗಳಿಗೆ

ಮೆ : ಶ್ರೀನಿವಾಸ ಎಂಟರ್‌ಪ್ರೈಸಸ್, ನಂ. 458,4ನೇ ಹಂತ ಪೀಣ್ಯ ಇಂಡಸ್ಟ್ರಿಯಲ್ ಏರಿಯಾ ಬೆಂಗಳೂರು – 560 058 ಇವರಿಂದ.